ಅರಣ್ಯೇತರ ಉದ್ದೇಶಕ್ಕೆ ಬಳಸಲು ಅರ್ಜಿ ಸಲ್ಲಿಸಿ ಕೇಂದ್ರ ಸರ್ಕಾರದಿಂದ 1980ರ ಅರಣ್ಯ (ಸಂರಕ್ಷಣಾ) ಕಾಯ್ದೆಯಂತೆ ಒಪ್ಪಿಗೆ ಪಡೆಯುವುದು ಅವಶ್ಯವಾಗಿರುತ್ತದೆ.

(4) ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯು ಎರಡು ಹಂತಗಳಲ್ಲಿ ಅನುಮೋದನೆಯನ್ನು ನೀಡುತ್ತದೆ. ಹಂತ –1 ರಲ್ಲಿ ಹಲವು ಷರತ್ತುಗಳನ್ನು ನಿಗದಿ ಪಡಿಸಿ ಉಪಯೋಗಿ ಸಂಸ್ಥೆಯು ಇದನ್ನು 5 ವರ್ಷಗಳ ಕಾಲಾವಧಿಯೊಳಗೆ ಪಾಲಿಸುವಂತೆ ನಿರ್ದೇಶನ ನೀಡುತ್ತದೆ.

(5) ಅರಣ್ಯ ಪ್ರದೇಶವನ್ನು ಬಿಡುಗಡೆ ಮಡಲು ಕೇಂದ್ರ ಸರ್ಕಾರವು ಒಂದು ಪ್ರಮುಖ ಷರತ್ತಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸುವುದನ್ನು ನಿಗದಿ ಪಡಿಸಿದೆ.

(6) ಇದರ ಜೊತೆಗೆ ಪ್ರಸ್ತುತ ಪ್ರದೇಶದ "ನಿವ್ವಳ ಮೌಲ್ಯ" (ಓಕಗಿ),ರಕ್ಷಿತ ವಲಯದ ಅಭಿವೃದ್ಧಿ ಮತ್ತು ಪುನರ್ವನ ನಿರ್ಮಾಣ ಹಾಗೂ ಇತರೆ ಶುಲ್ಕವನ್ನು ಸಹ ಉಪಯೋಗಿ ಸಂಸ್ಥೆಗಳು ಪಾವತಿ ಮಾಡಬೇಕು.

(7) ರಾಜ್ಯ ಸರ್ಕಾರದಿಂದ ಹಂತ–1ರ ಷರತ್ತುಗಳಿಗೆ ಅನುಸರಣಾ ವರದಿ ಬಂದ ಮೇಲೆ ಕೇಂದ್ರ ಸರ್ಕಾರವು ಅಂತಿಮ (ಹಂತ–2)ರ ಅನುಮೋದನೆಯನ್ನು ನೀಡುತ್ತದೆ.

(8) ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಗಳಾದ 01 – ನೀರಾವರಿ ಯೋಜನೆಗಳು, 02 – ಕಿರು ಜಲವಿದ್ಯುತ್ ಉತ್ಪಾದನೆ/ ಗಾಳಿಯಂತ್ರ ವಿದ್ಯುತ್ ಉತ್ಪಾದನೆ, 03– ಗಣಿಗಾರಿಕೆ / ಕಲ್ಲುಗಣಿಗಾರಿಕೆ, 04 – ರಸ್ತೆಗಳ ನಿರ್ಮಾಣ, 05 – ರೈಲ್ವೆ ಲೈನುಗಳ ನಿರ್ಮಾಣ, 06 – ವಿದ್ಯುತ್ ಲೈನುಗಳನ್ನು ಹಾಕಲು ಮತ್ತು 07 – ಇನ್ನಿತರೆ ಸಾರ್ವಜನಿಕ ಉದ್ದೇಶಗಳಿಗೆ ಬಿಡುಗಡೆ ಮಾಡಲಾಗುತ್ತದೆ.

(ಸದರಿ ಪ್ರಾಜೆಕ್ಟ್‌ಗಳ ಸ್ಥಾಪನೆಯು ಕೇಂದ್ರ ಸರ್ಕಾರದ ಅಂತಿಮ ಹಂತದ (ಹಂತ–2) ಅನುಮೋದನೆ ನಂತರವೇ ಅನುಷ್ಠಾನಗೊಳ್ಳುತ್ತದೆ.)

ವಿಷಯ:–ರಾಜ್ಯದಲ್ಲಿರುವ ಬಾಲಕಾರ್ಮಿಕರು.

14 (271) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) :– ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಸರ್ಕಾರ ಗುರುತಿಸಿರುವ ಬಾಲ ಕಾರ್ಮಿಕರುಗಳ ಸಂಖ್ಯೆ ಎಷ್ಟು; ಅವರ ಬಿಡುಗಡೆ ಮತ್ತು ಪುನರ್ ವಸತಿಗಾಗಿ ಸರ್ಕಾರದ ಕ್ರಮಗಳೇನು;

(ಅ) ಬಾಲ ಕಾರ್ಮಿಕರಿಂದ ದುಡಿಮೆಯನ್ನು ಮಾಡಿಸಿಕೊಳ್ಳುತ್ತಿರುವವರ ಮೇಲೆ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲು ಕಾರ್ಮಿಕ ಇಲಾಖೆಯವರು ಕೈಗೊಂಡ ಕ್ರಮಗಳೇನು;

(ಇ) ಬಾಲಕರ ಪೋಷಕರಿಗೆ ಅರಿವು ಮೂಡಿಸುವ ಮತ್ತು ಪ್ರಥಮ ಹಂತದಲ್ಲಿಯೇ ಮಕ್ಕಳು ದುಡಿಮೆಗೆ ಹೋಗದಂತೆ ತಡೆಹಿಡಿಯುವ ದಿಶೆಯಲ್ಲಿ ಸರ್ಕಾರ ಪರಿಣಾಮಕಾರಿ ಕ್ರಮಗಳನ್ನೇನಾದರೂ ಜರುಗಿಸಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು)

(ಅ) ರಾಜ್ಯದಲ್ಲಿ 2001–02 ನೇ ಸಾಲಿನಿಂದ ಸೆಪ್ಟೆಂಬರ್ 2011ರ ಅಂತ್ಯದವರೆಗೆ 1,03,902. ಬಾಲಕಾರ್ಮಿಕರನ್ನು ಪತ್ತೆಹಚ್ಚಲಾಗಿದೆ.

(1) ಬಾಲ ಕಾರ್ಮಿಕ ಪದ್ಧತಿಯನ್ನು ನಿಯಂತ್ರಿಸಲು ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಕಲಂ 3 ಮತ್ತು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರ ಕಲಂ 24ನ್ನು ಜಾರಿಗೆ ತರಲಾಗಿದೆ.

(2) ಮೇಲೆ ವಿವರಿಸಿರುವ ಎರಡೂ ಕಾಯ್ದೆಗಳನ್ನು ಅನುಷ್ಠಾನಕ್ಕೆ ತರಲು ಕಾರ್ಮಿಕ ಇಲಾಖೆಯಲ್ಲದೇ ರಾಜ್ಯದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ನಿರೀಕ್ಷಕರೆಂದು ಸರ್ಕಾರ ನೇಮಕ ಮಾಡಿದೆ.

(3) ತನಿಖೆಯಿಂದ ಮತ್ತು ಸಮೀಕ್ಷೆಯಿಂದ ಪತ್ತೆಹಚ್ಚಲಾದ ಬಾಲಕಾರ್ಮಿಕರ ಪುನರ್ ವಸತಿಗಾಗಿ ರಾಜ್ಯ ಸರ್ಕಾರ 2001ನಲ್ಲಿ ಕ್ರಿಯಾ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

(4) ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಿದ ತಕ್ಷಣ ಅವರನ್ನು ರಾಜ್ಯ ಸರ್ಕಾರ ನಡೆಸುತ್ತಿರುವ ವಿಶೇಷ ವಸತಿ ಶಾಲೆ ಮತ್ತು ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯ ಶಾಲೆಗಳಿಗೆ ದಾಖಲು ಮಾಡುವುದಲ್ಲದೆ ಕೆಲವು ಸಂದರ್ಭಗಳಲ್ಲಿ ಬಿಡುಗಡೆಯಾದ ಬಾಲ ಕಾರ್ಮಿಕರನ್ನು ನೇರವಾಗಿ ಮುಖ್ಯವಾಹಿನಿ ಶಾಲೆಗಳಿಗೆ ಸೇರಿಸಲಾಗುತ್ತಿದೆ.

(5) ಪ್ರತಿ ಜಿಲ್ಲೆಯಲ್ಲಿ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಾಲ ಕಾರ್ಮಿಕ ಯೋಜನಾ ಸೊಸೈಟಿಗಳನ್ನು ರಚಿಸಿದ್ದು, ಯೋಜನಾ ಸೊಸೈಟಿಗಳ ಮೂಲಕ ಬಾಲ ಕಾರ್ಮಿಕರಿಗೆ ಪುನರ್ ವಸತಿಯನ್ನು ಕಲ್ಪಿಸಲಾಗುತ್ತಿದೆ. ಜಿಲ್ಲಾ ಸೊಸೈಟಿಗಳ ಮೂಲಕ ರಾಜ್ಯ ಬಾಲ ಕಾರ್ಮಿಕರ ಯೋಜನೆಯಡಿಯಲ್ಲಿ ವಿಶೇಷ ವಸತಿ ಶಾಲೆ ಮತ್ತು ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯಡಿಯಲ್ಲಿ ವಿಶೇಷ ದಿನ ಶಾಲೆಗಳನ್ನು ನಡೆಸಲಾಗುತ್ತಿದೆ.

(6) ಶಿಕ್ಷಣವನ್ನು ಮುಂದುವರಿಸಲಾಗದ 14 ವರ್ಷ ಮೇಲ್ಪಟ್ಟ ಬಾಲ ಕಾರ್ಮಿಕರಿಗೆ ಶಿಕ್ಷಣದ ನಂತರ ಸ್ವಂತ ವೃತ್ತಿ ಪ್ರಾರಂಭಿಸಲು "ಕೌಶಲ್ಯ ಅಭಿವೃದ್ಧಿ" (Skill development) ಯೋಜನೆಯನ್ನು ರೂಪಿಸಲಾಗುತ್ತಿದೆ.

(ಆ) 1) ಬಾಲ ಕಾರ್ಮಿಕ ಪದ್ಧತಿಯನ್ನು ನಿಯಂತ್ರಿಸಲು ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಕಲಂ 3 ಮತ್ತು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರ ಅನ್ವಯ ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.

2) ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಬಾಲ ಕಾರ್ಮಿಕರನ್ನು ನೇಮಕ ಮಾಡಿಕೊಂಡಿರುವ ಮಾಲೀಕರಿಂದ ಪ್ರತಿ ಬಾಲ ಕಾರ್ಮಿಕನಿಗೆ ಸಂಬಂಧಿಸಿದಂತೆ ರೂ. 20,000/-ಗಳನ್ನು ಪರಿಹಾರವಾಗಿ ವಸೂಲಿ ಮಾಡಲಾಗುತ್ತಿದೆ.

(ಇ) 1) ಬಾಲ ಕಾರ್ಮಿಕ ಪದ್ಧತಿ ಅನುಷ್ಠಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ನಿಯಮಿತವಾಗಿ ಜನ ಜಾಗೃತಿ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯ ಕಾನೂನು ಅರಿವು ಪ್ರಾಧಿಕಾರದೊಂದಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾನೂನು ಅರಿವು ಕಾರ್ಯಕ್ರಮವನ್ನು ಮಾಡಲಾಗುತ್ತಿದೆ.

2) ಪ್ರತಿ ವರ್ಷ ಜೂನ್ 12ರಂದು "ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ" ವನ್ನಾಗಿ ಆಚರಿಸಲಾಗುತ್ತಿದೆ.

3) ಬಾಲ ಕಾರ್ಮಿಕರ ಬಗ್ಗೆ ಮಹಿತಿ/ದೂರು ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ 1098 ಉಚಿತ ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದೆ.

4) ಐಎಲ್ಒ (ILO) ಜೊತೆಗೂಡಿ, ಅಂತರ್ಜಾಲ ಆಧಾರಿತ ಬಾಲಕಾರ್ಮಿಕ ನಿಗಾ ವ್ಯವಸ್ಥೆ (Web Based Child Labour Tracking System) ತಂತ್ರಾಂಶ ಅಭಿವೃದ್ಧಿಪಡಿಸಿದ್ದು, ಇಲಾಖೆಯಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ.

ರೇಷ್ಮೆ ಬೆಳೆಗಾರರ ಮುಖ್ಯಾಂಶ:

15 (272) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) :- ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-